**<u>ಸಾಕ್ಷಿಯನ್ನು ದಿಃ 10.11.2020 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲುಃ ಅಬ್ಜೆಕ್ಟರ್ ರವರ ಪರ ಶ್ರೀ ಎಂ ಕೆ ಬಿ ವಕೀಲರಿಂದಃ</u>

ಕೊತ್ತೇಗಾಲದ ನಿಂಗಪ್ಪ ನನಗೆ ಗೊತ್ತಿಲ್ಲ. ಎನ್. ಮಾದಪ್ಪ, ನಂಜುಂಡಸ್ವಾಮಿ, ಶಿವಮ್ಮ, ಲಿಂಗರಾಜು ನನಗೆ ಗೊತ್ತು. ಪುಟ್ಟನಂಜಪ್ಪ ನನಗೆ ಗೊತ್ತಿಲ್ಲ. ಗೌರಮ್ಮ ಗೊತ್ತು. ಗೌರಮ್ಮನ ಗಂಡ ಪುಟ್ಟನಂಜಪ್ಪ ಇರುತ್ತಾರೆ ಎಂದರೆ ಸಾಕ್ಷಿಯು ನನಗೆ ಬರೆದುಕೊಟ್ಟಾಗ ಅವರು ಮೃತಪಟ್ಟಿದ್ದರು ಎಂದು ನುಡಿಯುತ್ತಾರೆ. ಗೌರಮ್ಮ ಮತ್ತು ಪುಟ್ಟನಂಜಪ್ಪನವರ ಮಕ್ಕಳು ನಾಗರಾಜು ಹಾಗೂ ನಾಗಲಾಂಭಿಕ ಇರುತ್ತಾರೆ ಎಂದರೆ ಸುಳ್ಳು. ಎನ್. ಮಾದಪ್ಪ, ನಂಜುಂಡಸ್ವಾಮಿ, ಶಿವಮ್ಮ, ಪುಟ್ಟನಂಜಪ್ಪ, ಲಿಂಗರಾಜು ಇವರು ಕೊತ್ತೇಗಾಲದ ನಿಂಗಪ್ಪನ ಮಕ್ಕಳು ಎಂದರೆ ಸಾಕ್ಷಿಯು ಶಿವಮ್ಮ ಅವರ ಮಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. ಕೊತ್ತೇಗಾಲದ ನಿಂಗಪ್ಪರವರಿಗೆ ಅವರ ತಂದೆ ನಿಂಗಯ್ಯರವರಿಂದ ಮಾರಶೆಟ್ಟಿಹಳ್ಳಿ ಗ್ರಾಮದ ಸಃನಂಃ 154/1 ರಲ್ಲಿ ಒಟ್ಟು 4 ಎಕರೆ 38 ಗುಂಟೆ ಜಮೀನು ಪಿತ್ರಾರ್ಜಿತವಾಗಿ ಬಂದಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಂತರ 1996 ರಲ್ಲಿ ಅದು ವಿಭಾಗ ಆಗಿತ್ತು ಎಂದು ನುಡಿಯುತ್ತಾರೆ. ನಾನು ಹೇಳಿದಂತೆ ಯಾವುದೇ ವಿಭಾಗ ಆಗಿರಲಿಲ್ಲ ಎಂದರೆ ಸರಿಯಲ್ಲ. ಕೊತ್ತೇಗಾಲದ ನಿಂಗಪ್ಪ ತನ್ನ ಮೊದಲನೇ ಹೆಂಡತಿ ಮಗ ಡಿ.ಎನ್. ನಂಜಪ್ಪ ರವರಿಗೆ 2 ಎಕರೆ ಜಮೀನನ್ನು ನೀಡಿದ್ದು, ಉಳಿದ 2 ಎಕರೆ 38 ಗುಂಟೆ ಜಮೀನನ್ನು ಆತನೇ ಕುಟುಂಬಕ್ಕೆ ಉಳಿಸಿಕೊಂಡಿದ್ದ ಎಂದರೆ ಸರಿಯಲ್ಲ. ಸದರಿ 2 ಎಕರೆ 38 ಗುಂಟೆ ಜಮೀನು ಈಗಲೂ ಸಹ 2 ನೇ ವಾದಿ ಮಾದಪ್ಪರವರು ಡಿ.ಎನ್. ನಂಜಪ್ಪ ರವರಿಗೆ ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಸರಿಯಲ್ಲ. ಸದರಿ ನೋಂದಣಿ ದಿನಾಂಕ 19.11.1969 ರಲ್ಲಿ ಆಗಿರುತ್ತದೆ ಎಂದರೆ ಸರಿಯಲ್ಲ. ನಂತರ ಮಾದಪ್ಪರವರು ತನ್ನ ಹೆಂಡತಿ ಮಹದೇವಮ್ಮನಿಗೆ ಸದರಿ ಜಮೀನನ್ನು ಹಕ್ಕು ಬದಲಾವಣೆ ಮಾಡಿರುತ್ತಾರೆ ಎಂದರೆ

ಸರಿಯಲ್ಲ. ಅದೇ ರೀತಿ ಅವರ ಹೆಸರಿಗೆ ಪಹಣಿ ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. 2 ಎಕರೆ 28 ಗುಂಟೆ ಜಮೀನು 2 ನೇ ವಾದಿ ಮಾದಪ್ಪ, 1 ನೇ ಪ್ರತಿವಾದಿ ನಂಜುಂಡಸ್ವಾಮಿ, 2 ನೇ ಪ್ರತಿವಾದಿ ಲಿಂಗರಾಜು ಮತ್ತು 3 ನೇ ಪ್ರತಿವಾದಿಯ ಗಂಡ ಪುಟ್ಟನಂಜಪ್ಪ ಇವರುಗಳ ಜಂಟಿ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಅಲ್ಲಿ ಉಳಿದಿರುವುದು 2 ಎಕರೆ 38 ಮಾತ್ರ ಜಮೀನು ಎಂದರೆ ಸರಿಯಲ್ಲ. ನನಗೆ ನೋಟರಿಕೃತ ಕ್ರಯದ ಕರಾರನ್ನು ನಂಜುಂಡಸ್ವಾಮಿ, ಲಿಂಗರಾಜು ಮತ್ತು ಗೌರಮ್ಮ ಬರೆದುಕೊಟ್ಟಿರುತ್ತಾರೆ. ಅವರಿಗೆ 3 ಎಕರೆ ಜಮೀನು ಕರಾರು ಮಾಡಲು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ಪಾಲುಪಾರಿಕತ್ತು ಮತ್ತು ಪಹಣಿ ಪತ್ರಿಕೆ ನೋಡಿ ನಾನು ಕರಾರು ಬರೆಯಿಸಿಕೊಂಡಿರುತ್ತೇನೆ. ಗ್ರಾಮದಲ್ಲಿ ವಿಚಾರಿಸಿ ಅವರ ಮಾಲೀಕತ್ವಕ್ಕೆ ಸೇರಿರುತ್ತದೆ ಎಂದು ದೃಢೀಕರಿಸಿಕೊಂಡು ನಾನು ಕರಾರು ಬರೆಯಿಸಿಕೊಂಡಿರುತ್ತೇನೆ. ಸದರಿ ವ್ಯಕ್ತಿಗಳ ಸಾಕ್ಷಿ ವಿಚಾರಣೆ ನ್ಯಾಯಾಲಯಕ್ಕೆ ಕೊಡಿಸಲು ನನಗೆ ತೊಂದರೆ ಇರುವುದಿಲ್ಲ. ನಾನು ಯಾವುದೇ ಊರಿನ ಜನರನ್ನು ವಿಚಾರಿಸಿರುವುದಿಲ್ಲ ಎಂದರೆ ಸರಿಯಲ್ಲ.

ಅಸಲು ದಾವೆ 437/2007 ರ ದಾವೆಯನ್ನು ನಾನು ನಂಜುಂಡಸ್ವಾಮಿ, ಗೌರಮ್ಮ ಮತ್ತು ಲಿಂಗರಾಜುರವರ ವಿರುದ್ಧ ದಾಖಲು ಮಾಡಿದ್ದೆ ಎಂದರೆ ಸರಿ. ಸದರಿ ದಾವೆ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಈ ದಾವೆಯ ವಾದಿಗಳು ಪಕ್ಷಕಾರರು ಇರುವುದಿಲ್ಲ ಎಂದರೆ ಸರಿ. ಅಸಲು ದಾವೆ 437/2007 ಮತ್ತು ಆರ್ ಎ 166/2011 ರ ತೀರ್ಪು ಮತ್ತು ಡಿಕ್ರಿ ವಾದಿಗಳಿಗೆ ಬಂದನಕಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 01.03.2006 ರ ಕ್ರಯದ ಕರಾರು ಪತ್ರವನ್ನು ನಾನು ಈ ದಾವೆಯಲ್ಲಿ ಸಲ್ಲಿಸಿರುವುದಿಲ್ಲ ಎಂದರೆ ಸರಿ. ದಿನಾಂಕ 09.07.1996 ರಲ್ಲಿ ಯಾವುದೇ

ಪಾಲುಪಾರಿಕತ್ತು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ನಾನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. 2 ನೇ ವಾದಿಗೆ ಖಾತೆ ಬದಲಾವಣೆಗಾಗಿ ಸಹಿ ಬೇಕು ಎಂದು ಅವರ ಸಹಿಯನ್ನು ಪಡೆದು ಪಾಲುಪಾರಿಕತ್ತು ಸೃಷ್ಠಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 2 ನೇ ವಾದಿ ಬಿಟ್ಟು ಉಳಿದವರೆಲ್ಲರೂ ದೇವಾಪುರ ಗ್ರಾಮದಲ್ಲಿ ವಾಸವಾಗಿದ್ದ ಕಾರಣ ಆ ಬಗ್ಗೆ ಅವರಿಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಶಿವಮ್ಮ ಕೊತ್ತೇಗಾಲದ ನಿಂಗಪ್ಪನ ಮಗಳು ಇರುತ್ತಾಳೆ ಎಂದರೆ ಸರಿಯಲ್ಲ. ಆಕೆಗೆ ಹಕ್ಕು ಇರುತ್ತದೆ ಎಂಬ ಕಾರಣಕ್ಕಾಗಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2006 ನೇ ಇಸವಿಯಲ್ಲಿಯೂ ಕೂಡ 2 ಎಕರೆ 38 ಗುಂಟೆ ಮಾತ್ರ ಜಂಟೀ ಖಾತೆಯಲ್ಲಿತ್ತು ಎಂದರೆ ಸರಿಯಲ್ಲ. ಆದ್ದರಿಂದ ವಾದಿಗಳಿಗೆ ದಾವಾಸ್ವತ್ತಿನಲ್ಲಿ 2/5 ರಷ್ಟು ಭಾಗಾಂಶ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಗೆ ಪೂರಕವಾದ ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.